"ಹಾಗಿದ್ರೆ ಮಗಳು ಹುಟ್ತಾಳೆ..."

"ಬೇಜಾರೇನಿಲ್ಲ ತಾನೇ? ಕೆಲವರಿಗೆ ಹೆಣ್ಣುಮಕ್ಳು ಅಂದ್ರೆ ಇಷ್ಟ ಆಗಲ್ಲ..."

"ಥೋಥೋ, ನಿನ್ನಂತಾ ಮಗಳು ಹುಟ್ತಾಳೆ ಅಂದ್ರೆ ಯಾರಿಗೆ ಖುಷಿಯಾಗಲ್ಲ? ಮನೆಗೆ ಮಹಾಲಕ್ಷ್ಮಿ ಬರ್ತಾಳೆ ಅಂದ್ರೆ ಯಾರಿಗೆ ಬೇಡ?"

"ನೋಡೋಕೆ ನಿಮ್ಮ ಹಾಗಿದ್ರೆ?"

"ಬೇಡ ಕಣೇ..."

"ನನಗೆ ನಿಮ್ಮ ಹಾಗಿರೋ ಮಗಳು ಬೇಕು. ಹೆಣ್ಣುಮಕ್ಕಳು ಅಪ್ಪನ ಹಾಗಿದ್ರೆ ಅದೃಷ್ಟ ಅಂತಾರೆ."

"ಹಾಗಿದ್ರೆ ನಿನ್ನ ಕಣ್ಣಲ್ಲಿ ನಾನು ಚೆನ್ನಾಗಿ ಕಾಣ್ತೆದೀನಿ ಅನ್ನು..."

"ಬಾಯ್ಬಿಟ್ಟು ಹೇಳ್ಬೇಕಾ? ಚಂದ ಅನ್ನೋದು ಬರೀ ರೂಪದಲ್ಲಿ ಮಾತ್ರಾ ಇರಲ್ಲ ಕಣ್ರೀ. ಗುಣದಲ್ಲಿ, ಸ್ವಭಾವದಲ್ಲಿ ಇರೋ ಚಂದ ಕೂಡಾ ರೂಪಕ್ಕೆ ಸೇರ್ಕೊಳ್ಳುತ್ತೆ."

"ಚಂದಕ್ಕೆ ಹೊಸ ಹೇಳಿಕೆ ಕೊಡ್ತಿದ್ದಿ..."

"ಅಂದ್ಕೊಳ್ಳಿ ಹಂಗೇ. ನಿಮ್ಮಷ್ಟು ಚೆನ್ನಾಗಿರೋರನ್ನ ಇದುವರೆಗೆ ನಾನು ನೋಡೇ ಇರ್ಲಿಲ್ಲ..."

ಈ ಹೊಗಳಿಕೆಯನ್ನು ಜೀರ್ಣಿಸಿಕೊಳ್ಳಲಾಗದೆ ಅನಂತ ತಬ್ಬಿಬ್ಬಾಗಿದ್ದ. ಸುಳ್ಳೇ ಉಬ್ಬಿಸಲು ಹೇಳುತ್ತಿದ್ದಾಳೆ ಅಂದುಕೊಂಡರೆ ಅವಳ ಕಂಗಳಲ್ಲಿನ ಅಮಾಯಕತೆ ಅವಳ ಹೇಳಿಕೆಗೆ ಸ್ಪಷ್ಟನೆ ನೀಡುವಷ್ಟು ಪ್ರಾಮಾಣಿಕವಾಗಿತ್ತು. ಅನಂತನ ಕಣ್ಣುಗಳು ತುಂಬಿಕೊಂಡು, ಗಂಟಲು ಬಿಗಿದಂತಾಗಿ, ಹೆಂಡತಿಯ ನೋಟ ತಪ್ಪಿಸಿಕೊಂಡಿದ್ದ, ಅವಳಿಗೆ ಇನ್ನಷ್ಟು ಪಾಯಸ ಬಡಿಸುವ ಹೆಳೆಯಲ್ಲಿ. 'ದೇವರೇ, ಈ ಸುಖಕ್ಕೆ ಯಾರ ದೃಷ್ಟಿಯೂ ತಗುಲದಿರಲಿ' ಎಂದು ವಿನಾಕಾರಣ ಅನಿಸಿಬಿಟ್ಟಿತ್ತು.

★★★

"ನೀವೇನು ದನ ಅಂದ್ಕೊಂಡಿದೀರಾ?" ಕೇಳಿದಳು ನಳಿನಿ.

"ಏ ಪೆದ್ದು, ಗಂಡಸರಿಗೆ ಬಸವ ಅಂತಾರೆ. ದನ ಅನ್ನಲ್ಲ..."

"ಏನೋ ಒಂದು..."

"ಯಾಕೇ, ನಿನ್ನ ಕಣ್ಣಲ್ಲಿ ನಂಗೆ ಕೋಡು ಬಂದಿರೋ ಹಾಗೆ ಕಾಣ್ಸ್ತಿದೆಯಾ?"

"ಏನೋಪ್ಪ, ಬರ್ತಾ ಇದೆ ಅನ್ನಿಸ್ತಿದೆ..." ಅವನ ತಲೆ ಬೆಳಚಿದ್ದಳು ನಳಿನಿ. ಅವಳ ಕೈ ಹಿಡಿದು ಕೆನ್ನೆಗೊತ್ತಿಕೊಂಡಿದ್ದ ಅನಂತ. ಕೋಮಲ ಕರಗಳಿಗೆ ಕುರುಚಲು ಗಡ್ಡದ ದೊರಗು ತರಚಿದಂತಾಗಿ "ಹಾ..." ಅಂದಿದ್ದಳು ನಳಿನಿ, ಸುಳ್ಳೇ...

"ಯಾಕೆ ದನ ಅಂದಿದ್ದು ನೀನು?" ಕೇಳಿದ್ದ ಅನಂತ.

ಎದುರಿನ ತಾಂಬೂಲದ ತಟ್ಟೆ ತೋರಿಸಿದ್ದಳು ನಳಿನಿ. ಜೋಡಿಸಿ ತಂದಿದ್ದ ಚಿಗುರೆಲೆಯ ಕಟ್ಟು ಮಾಯವಾಗಿತ್ತು. ಅಡಿಕೆಪುಡಿ ತಳ ಕಂಡಿತ್ತು.

"ಇಷ್ಟೆಲ್ಲಾ ಎಲೆ ತಿಂದೋರಿಗೆ ದನ ಅನ್ನದೆ ಮತ್ತೇನನ್ನೋದು, ನೀವೇ ಹೇಳಿ..."

"ನೀನು ಕಣ್ಣೆದುರಿಗಿದ್ರೆ ಲೆಕ್ಕ ತಪ್ಪಿ ಹೋಗುತ್ತೆ ನಂಗೆ. ಏನಾಯ್ತೀಗ, ನಮ್ಮ ತೋಟದ ಹಂಬಿನಲ್ಲೇ ಬೆಳೆದಿದ್ದಪ್ಪಾ..."

"ಅದಕ್ಕಲ್ಲ ಹೇಳಿದ್ದು. ಇಷ್ಟೆಲ್ಲಾ ಮೆಂದು ಮುಗಿಸ್ಬೇಕಾದ್ರೆ ಹೊತ್ತೆಷ್ಟಾಗಿರುತ್ತೆ ಅಂತ ಗೊತ್ತಾಗುತ್ತೆ ತಾನೇ?"

ತುಂಬು ಚಂದಿರ ಮತ್ತಷ್ಟು ಮೇಲಕ್ಕೆ ಏರಿ ಬಂದಿದ್ದ. ಬೆಳದಿಂಗಳು ಸೋನೆಯಂತೆ ಸುರಿದು ಬಂದು ಭುವಿಯನ್ನು ತೋಯಿಸುತ್ತಿತ್ತು. ಬದಿ ಕುಳಿತವಳ ಮುಖದಲ್ಲಿ ಆ ಬೆಳಕು ಪ್ರತಿಫಲಿಸಿ ಮತ್ತೊಂದು ಚಂದ್ರಮನಂತೆ ಕಂಗೊಳಿಸುತ್ತಿದ್ದಳು ನಳಿನಿ. ಪ್ರೀತಿಯೆಂಬ ಮಾಯೆ ವಾಸ್ತವಕ್ಕೆ ಉತ್ಪ್ರೇಕ್ಷೆಯ